**ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 17-04-1969.**

**(ओम शान्ति,  बापदादा. अव्यक्त मुरली 17-04-1969)**

ಬ್ರಾಹ್ಮಣರ ಮುಖ್ಯ ಸಂಸ್ಕಾರ - ಸರ್ವಸ್ವ ತ್ಯಾಗಿ.

**(ब्राहमणों का मुख्य संस्कार - सर्वस्व त्यागी)**

ತಮ್ಮೆಲ್ಲರ ಸಂಘಟನೆಯನ್ನು ಏಕೆ ಸಭೆ ಕರೆಯಲಾಗಿದೆ? ಸಂಘಟನೆಗಾಗಿ ಮುಖ್ಯ ನಾಲ್ಕು ಮಾತುಗಳ ಅವಶ್ಯಕತೆಯಿದೆ. 1.ಪರಸ್ಪರರಲ್ಲಿ ಸ್ನೇಹ 2.ಸಮೀಪದ ಸಂಬಂಧ 3.ಸೇವೆಯ ಜವಾಬ್ದಾರಿ 4.ಜ್ಞಾನ--ಯೋಗದ ಧಾರಣೆಯ ಪ್ರಮಾಣ. ಈ ನಾಲ್ಕು ಮಾತುಗಳಲ್ಲಿ ಸಿದ್ಧರಾಗಿರುವಿರಾ? ಪರಸ್ಪರರು ಸ್ನೇಹಿಯಾಗುವುದು ಹೇಗೆ? ಸಂಸ್ಕಾರ, ಸಂಕಲ್ಪಗಳ ಹೊಂದಾಣಿಕೆಯಿಲ್ಲದಿರುವುದೇ ಪರಸ್ಪರರು ದೂರವಾಗಲು ಕಾರಣವಾಗಿದೆ. ಎಲ್ಲರ ಸಂಕಲ್ಪ, ಸಂಸ್ಕಾರಗಳು ಒಂದೇ ಹೇಗೆ ಆಗುವವು. (ಪ್ರತಿಯೊಬ್ಬರ ಸಂಸ್ಕಾರಗಳು ಅವರವರದಾಗಿವೆ). ಸಂಗಮಯುಗದ ಬ್ರಾಹ್ಮಣರ ಸಂಸ್ಕಾರ ಯಾವುದಾಗಿದೆ? ಸಾಕಾರ ರೂಪದಲ್ಲಿ ಯಾವ ಸಂಸ್ಕಾರ ಮುಖ್ಯವಾಗಿತ್ತು? ಯಾವುದು ಬ್ರಹ್ಮನ ಸಂಸ್ಕಾರವೋ ಅದೇ ಬ್ರಾಹ್ಮಣರ ಸಂಸ್ಕಾರವಾಗಿದೆ. ಸಾಕಾರ ಬ್ರಹ್ಮಾರವರಲ್ಲಿ ಯಾವ ಸಂಸ್ಕಾರ ಮುಖ್ಯವಾಗಿತ್ತು? ಅವರಲ್ಲಿ ಸರ್ವಸ್ವವನ್ನು ತ್ಯಾಗ ಮಾಡುವ ಸಂಸ್ಕಾರ ಸಂಪೂರ್ಣ ರೂಪದಲ್ಲಿದ್ದುದನ್ನು ನೋಡಿದ್ದೀರಿ. ಆದರೆ ಬ್ರಾಹ್ಮಣರಲ್ಲಿ ಯಥಾಯೋಗ, ಯಥಾಶಕ್ತಿ ಇದೆ. ನಿರಹಂಕಾರಿ ಪದದ ಅರ್ಥವೇ ಆಗಿದೆ 'ಸರ್ವಸ್ವತ್ಯಾಗಿ'. ಅವರು ತಮ್ಮದೆಲ್ಲವನ್ನು ತ್ಯಾಗ ಮಾಡುತ್ತಾರೆ. ಸರ್ವಸ್ವ ತ್ಯಾಗಿಯಾಗುವುದರಿಂದ ಸರ್ವ ಗುಣಗಳು ಬರುತ್ತವೆ. ಬೇರೆಯವರ ಅವ ಗುಣಗಳನ್ನು ನೋಡದಿರುವುದು – ಇದೂ ಕೂಡ ತ್ಯಾಗವಾಗಿದೆ. ತ್ಯಾಗದ ಅಭ್ಯಾಸವಿದ್ದರೆ ಇದನ್ನೂ ತ್ಯಾಗ ಮಾಡಬಲ್ಲಿರಿ. ಸರ್ವಸ್ವ ತ್ಯಾಗಿ ಎಂದರೆ ದೇಹಬಾನದ ತ್ಯಾಗವೂ ಬರುತ್ತದೆ. ಅದರಿಂದ ಬ್ರಾಹ್ಮಣರ ಮುಖ್ಯ ಸಂಸ್ಕಾರವಾಗಿದೆ ಸರ್ವಸ್ವ ತ್ಯಾಗ. ಈ ತ್ಯಾಗದಿಂದ ಮುಖ್ಯವಾಗಿ ಯಾವ ಗುಣಗಳು ಬರುತ್ತವೆ? ಸರಳತೆ ಮತ್ತು ಸಹನಶೀಲತೆ. ಯಾರಲ್ಲಿ ಈ ಗುಣಗಳಿವೆಯೋ ಅವರು ಬೇರೆಯವರನ್ನು ಅವಶ್ಯಕವಾಗಿ ಆಕರ್ಷಿಸುತ್ತಾರೆ ಮತ್ತು ಸ್ನೇಹಿತರೂ ಆಗುತ್ತಾರೆ. ಒಂದು ವೇಳೆ ಸರಳತೆಯಿಲ್ಲದಿದ್ದರೆ ಸ್ನೇಹವಿರಲು ಸಾಧ್ಯವಿಲ್ಲ. ಪರಸ್ಪರರು ಸ್ನೇಹಿಯಾಗಿ ಇರಬೇಕೆಂದರೆ ಇದೇ ಅದರ ವಿಧಾನವಾಗಿದೆ. ಒಂದಾಗಿದೆ ದೇಹ ಸಹಿತ ಸರ್ವಸ್ವತ್ಯಾಗಿ. ಇದರಿಂದ ಸರಳತೆ, ಸಹನಶೀಲತೆ ತಾವಾಗಿ ಬರುವವು. ಆದ್ದರಿಂದ ಸರ್ವಸ್ವತ್ಯಾಗಿಯ ಲಕ್ಷಣಗಳು ಸರಳತೆ ಮತ್ತು ಸಹನಶೀಲತೆ. ಸಾಕಾರ ರೂಪದಲ್ಲೂ ನೋಡಿದಿರಲ್ಲವೇ? ಎಷ್ಟು ಜ್ಞಾನಸಂಪನ್ನರೋ ಅಷ್ಟೇ ಸರಳ ಸ್ವಭಾವದವರು. ಅದನ್ನೇ ಬಾಲ್ಯದ ಸಂಸ್ಕಾರಗಳೆನ್ನುವರು. ಇತ್ತ ವೃದ್ಧ, ಅತ್ತ ಬಾಲ್ಯತನ.

ತಂದೆ ಮತ್ತು ದಾದಾರವರ ಚಿತ್ರವನ್ನು ತೋರಿಸುವಂತಹ ನಡೆನುಡಿ ತಮ್ಮೆಲ್ಲರದಾಗಿರಲಿ. ಮಾತಿನಿಂದಲ್ಲ. ನಡವಳಿಕೆಯಿಂದ ಚಿತ್ರಕಂಡು ಬರುವುದು. ಈಗ ಆ ರೀತಿಯ ನಡವಳಿಕೆ ಇದೆಯೇ? ತಮ್ಮ ಚಲನವಲನದಿಂದ ಬಾಪ್ ದಾದಾರವರ ಚಿತ್ರ ಕಂಡು ಬರುತ್ತದೆಯೇ? ಕೆಲವು ವೇಳೆ ಕಂಡು ಬರುತ್ತದೆಯೇ? ಯಾವಾಗ ಆ ಸ್ಥಿತಿಯಲ್ಲಿದ್ದು ಸೇವೆ ಮಾಡುತ್ತಿರೋ ಆಗ ತಮ್ಮ ವಾಣಿಯಿಂದ, ಮುಖಚರ್ಯೆಯಿಂದ ಇವರಿಗೆ ಜ್ಞಾನವನ್ನು ಕೊಡುವವನು ಸರ್ವಶ್ರೇಷ್ಠನೆಂದು ಗೊತ್ತಾಗುತ್ತದೆ. ತಮ್ಮ ನಡವಳಿಕೆಯಿಂದ ಬಾಪ್ ದಾದಾರವರ ಚಿತ್ರ ಕಾಣುತ್ತದೆ ಎಂದು ಹೇಳುತ್ತೀರಲ್ಲವೇ. ಆದರೆ ಆಗಾಗ. ತಾವೂ ಸಹ  ಕ್ಯಾಮೆರಾ ಆಗಿದ್ದೀರಿ? ತಮ್ಮ ಕ್ಯಾಮೆರಾದಲ್ಲಿ ಬಾಪ್ ದಾದಾರವರ ಚಿತ್ರ ಅಚ್ಚಾಗಿದೆ. ಅದನ್ನು ಕೆಲವೊಮ್ಮೆ ಮಾತ್ರ ಏಕೆ ತೋರಿಸುತ್ತೀರಿ, ಸದಾ ಅದೇ ಚಿತ್ರವನ್ನು ನಡತೆಯಲ್ಲಿ ಏಕೆ ತೋರಿಸುವುದಿಲ್ಲ? (ಪುರುಷಾರ್ಥವಿದೆ) ಈ ಪುರುಷಾರ್ಥವೆಂಬ ಶಬ್ದ ಎಲ್ಲಿಯವರೆಗೆ ಇರಬೇಕು? ಇನ್ನು ಎಷ್ಟು ಸಮಯ ಪುರುಷಾರ್ಥ ಮಾಡಬೇಕು? ನಾವು ಪುರುಷಾರ್ಥಿಯೆಂದು ಅಂತ್ಯದವರೆಗೂ ಹೇಳುವಿರೇನು?

ಪುರುಷಾರ್ಥವೆಂಬ ಶಬ್ದ ಈಗ ಬದಲಾಗಬೇಕು. ಬಲೆ ಅಂತ್ಯದವರೆಗೂ ಪುರುಷಾರ್ಥಿಗಳಾಗಿರುವಿರಿ, ಆದರೆ ಈಗ ಹೇಳುವಂತೆ ಅಲ್ಲ. **ಒಮ್ಮೆ ಮಾಡಿದ ತಪ್ಪನ್ನು ಮತ್ತೊಮ್ಮೆ ಮಾಡದಿರುವುದು ಪುರುಷಾರ್ಥದ ಅರ್ಥವಾಗಿದೆ.** ಈ ರೀತಿಯ ಪುರುಷಾರ್ಥವಿದೆಯಾ? ಈ ಅರ್ಥವನ್ನು ನಿಜಜೀವನದಲ್ಲಿ ತರಬೇಕು. ಒಂದೇ ತಪ್ಪು ಮತ್ತೆ-ಮತ್ತೆ ಮಾಡಿದರೆ ಅದನ್ನು ಹೇಗೆ ಪುರುಷಾರ್ಥವೆಂದು ಕರೆಯಲಾಗುತ್ತದೆ? ಪುರುಷಾರ್ಥದ ಅರ್ಥಕ್ಕನುಗುಣವಾಗಿ ಪುರುಷಾರ್ಥ ಮಾಡಬೇಕು. ಇದು ಪುರುಷಾರ್ಥದ ಗುರಿಯಾಗಿದೆ. ಇನ್ನು ಈ ತರಹದ ಪುರುಷಾರ್ಥವೆಂಬ ಶಬ್ದವೂ ಇರಬಾರದು. ಪರಸ್ಪರರು ಸ್ನೇಹಿಗಳಾಗುವುದು ಹೇಗೆ? ಕೇವಲ ಪತ್ರ ವ್ಯವಹಾರ, ಸಂಘಟನೆಯಿಂದನಾ? ಇದರಿಂದ ಆಗುವುದಿಲ್ಲ, ಇದು ಸ್ಥೂಲ ಮಾತಾಗಿದೆ. ಆದರೆ ಸಂಸ್ಕಾರ ಮತ್ತು ಸಂಕಲ್ಪಗಳನ್ನು ಹೊಂದಾಣಿಕೆ ಮಾಡಿಕೊಂಡಾಗ ಪರಸ್ಪರರಲ್ಲಿ ಸ್ನೇಹವಿರಲು ಸಾಧ್ಯ. ಅದರ ವಿಧಿಯನ್ನೂ ಹೇಳಿದೆವು (ಸರ್ವಸ್ವ ತ್ಯಾಗಿ). ಸರ್ವಸ್ವ ತ್ಯಾಗಿಯ ಲಕ್ಷಣವೇನು? (ಸರಳತೆ, ಸಹನಶೀಲತೆ). ಈ ಮಾತುಗಳನ್ನು ಧಾರಣೆ ಮಾಡಿದಾಗ ಸ್ನೇಹಿಗಳಾಗುವಿರಿ.

ಸರಳತೆಯನ್ನು ತರಲು ವರ್ತಮಾನ ಸಮಯದಲ್ಲಿ ಕೇವಲ ಒಂದು ಮಾತನ್ನು, ಗಮನದಲ್ಲಿಟ್ಟುಕೊಳ್ಳಬೇಕು. ಇತ್ತೀಚಿನ ಸಮಯದಲ್ಲಿ ಸ್ಥಿತಿ ಸ್ವಲ್ಪ ಸ್ತುತಿಯನ್ನು ಆಧರಿಸಿದೆ ಎಂಬುದು ಕಂಡು ಬರುತ್ತದೆ. ಸ್ತುತಿ ಮತ್ತು ನಿಂದೆಯೆಂಬ ಎರಡು ಶಬ್ದಗಳಿವೆಯಲ್ಲವೇ? ವರ್ತಮಾನ ಸಮಯ ಸ್ತುತಿಯ ಆಧಾರದ ಮೇಲೆ ಸ್ಥಿತಿ ಇದೆ. ಅಂದರೆ ಯಾವ ಕರ್ಮಗಳನ್ನು ಮಾಡುತ್ತಿರೋ ಅದರ ಫಲದ ಇಚ್ಛೆ ಅಥವಾ ಲೋಭ ಹೆಚ್ಚಿರುತ್ತದೆ. ಸ್ತುತಿಯಿಲ್ಲದಿದ್ದರೆ ಸ್ಥಿತಿಯೂ ಇರುವುದಿಲ್ಲ, ಸ್ತುತಿ ಇದ್ದರೆ ಸ್ಥಿತಿಯೂ ಇರುತ್ತದೆ. ಒಂದು ವೇಳೆ ನಿಂದೆಯಾದರೆ ನಿರ್ಧನಿಗಳಾಗುತ್ತಾರೆ. ತಮ್ಮ ಸ್ಥಿತಿಯನ್ನು ಬಿಟ್ಟು ಧಣಿ (ಮಾಲಿಕ)ನನ್ನೂ ಮರೆಯುತ್ತೀರಿ. ಆದ್ದರಿಂದ ನಮ್ಮ ಸ್ತುತಿ ಮಾಡಲಿ ಎಂದು ಎಂದಿಗೂ ಯೋಚಿಸಬೇಡಿ. ಸ್ತುತಿಯ ಆಧಾರದ ಮೇಲೆ ಸ್ಥಿತಿ ಇಟ್ಟುಕೊಳ್ಳಬೇಡಿ. ಒಂದು ವೇಳೆ ಸ್ತುತಿಯ ಆಧಾರದ ಮೇಲೆ ಸ್ಥಿತಿಯಿದ್ದರೆ ತಳಮಳಗೊಳ್ಳುವಿರಿ. ಅನನ್ಯರಾಗಿರುವವರ ಪ್ರಭಾವ ದಿನ-ದಿನಕ್ಕೆ ತನ್ನಿಂದ ತಾನೇ ಪ್ರಕಟವಾಗುವುದು. ಆದರೆ ಪ್ರಭಾವದಲ್ಲಿ ಸ್ವಯಂ ತಾವೇ ಪ್ರಭಾವಿತರಾಗಬಾರದು. **ಇಲ್ಲಿಯೇ ಫಲವನ್ನು ಸ್ವೀಕರಿಸಿದರೆ ಭವಿಷ್ಯದ ಫಲವನ್ನು ಖಾಲಿ ಮಾಡಿಕೊಳ್ಳುತ್ತೀರಿ** . ಎಷ್ಟು ಪುರುಷಾರ್ಥ ಗುಪ್ತವೋ, ಅಷ್ಟೇ ಗುಪ್ತ ಸಹಯೋಗಿಗಳು, ಅಷ್ಟೇ ಗುಪ್ತವಾಗಿ ಪದವಿ ಸಿಗುತ್ತದೆ. ಬೇರೆಯವರು ಎಷ್ಟೇ ಮಹಿಮೆ ಮಾಡಿದರೂ ಅವರ ಮಹಿಮೆಯ ಪ್ರಭಾವದಲ್ಲಿ ಸ್ವಯಂ ಪ್ರಭಾವಿತರಾಗಬಾರದು.

ಯಾವುದೇ ಕಾರ್ಯವನ್ನು ಮಾಡಬೇಕಾದರೂ ಸಂಗಮದಲ್ಲಿದ್ದು ನಿರ್ಣಯವನ್ನು ತೆಗೆದುಕೊಳ್ಳಿ ಏಕೆಂದರೆ ತಾವೆಲ್ಲರೂ ತಮ್ಮನ್ನು ಸಂಗಮ ಯುಗದವರು ಎಂದು ಕರೆದುಕೊಳ್ಳುತ್ತೀರಲ್ಲವೇ? ಪ್ರತಿಯೊಂದು ಮಾತಿಗೂ ಎರಡು ಮುಖಗಳಿವೆ, ಅದರಿಂದ ಏನು ಮಾತು ಬಂದರೂ ಎರಡರ ಮಧ್ಯೆ ಸಂಗಮದಲ್ಲಿದ್ದು ನಿರ್ಣಯವನ್ನು ತೆಗೆದುಕೊಳ್ಳಿ. ಇತ್ತಲೂ ಜಾಸ್ತಿಯಲ್ಲ, ಅತ್ತಲೂ ಅಲ್ಲ, ಸಂಗಮದಲ್ಲಿದ್ದು (ಮಧ್ಯ) ತೆಗೆದುಕೊಳ್ಳಿ. ಸಂಗಮಯುಗದ ಬ್ರಾಹ್ಮಣರ ಕರ್ತವ್ಯ ಇತ್ತ ಕಡೆಗೆ, ಅಥವಾ ಅತ್ತಕಡೆಗೆ ಹೋಗುತ್ತದೆ, ಸಂಗಮದಲ್ಲಿಯೇ ನಿಂತಿರುವುದಿಲ್ಲ. ತಾವು ಹೇಗೆ ಗೃಹಸ್ತ ವ್ಯವಹಾರದಲ್ಲಿರುತ್ತೀರಿ ಮತ್ತು ಸೇವಯಲ್ಲಿಯೂ ಸಹಯೋಗಿಗಳಾಗಿರುತ್ತೀರಿ, ಎರಡೂ ಕಡೆಗೂ ಸಂಭಾಲನೆ ಮಾಡಲು ಎರಡರ ಮಧ್ಯದಲ್ಲಿ ನಿಲ್ಲಬೇಕಾಗುತ್ತದೆ. ಎರಡರ ಮಧ್ಯದ ಸ್ಥಿತಿಯಲ್ಲಿ ಸ್ಥಿತರಾಗಬೇಕು. ಸಂಗಮದಲ್ಲಿದ್ದರೆ ಎರಡನ್ನೂ ಸರಿಯಾಗಿಟ್ಟುಕೊಳ್ಳಲು ಸಾಧ್ಯ. ನಿಮ್ಮ ಆಹಾರ, ಪಾನೀಯ, ಉಡುಗೆ- ತೊಡುಗೆ ಎಲ್ಲವೂ ಮಧ್ಯಮವಾಗಿರಬೇಕು. ಈ ರೀತಿ ನಿರ್ಣಯ ತೆಗೆದುಕೊಳ್ಳುತ್ತೀರುವಿರಾ? ಮಧ್ಯದ ಸ್ಥಿತಿಯಲ್ಲಿ ಸ್ಥಿತರಾಗಿ ಎರಡರ ಬಗ್ಗೆ ನಿರ್ಣಯ ತೆಗೆದುಕೊಂಡು ಮುಂದುವರೆಯಬೇಕು. ಅನೇಕ ಮಾತುಗಳಲ್ಲಿ ಮಧ್ಯದಲ್ಲಿರಬೇಕು, ಆದರೆ ಈ ಕಡೆಗೆ ಅಥವಾ ಅತ್ತ ಕಡೆಗೆ ವಾಲುವಿಕೆ ವಿಶೇಷವಾಗಿ ಕಂಡು ಬರುತ್ತದೆ. ಮಧ್ಯದ ಸ್ಥಿತಿಯಾಗಿದೆ ಬೀಜರೂಪ, ಬಿಂದು ಸ್ಥಿತಿ. ಹೇಗೆ ಬೀಜ ಸೂಕ್ಷ್ಮವಾಗಿರುತ್ತದೆಯೋ ಹಾಗೆಯೇ ಮಧ್ಯದ ಸ್ಥಿತಿಯೂ ಸೂಕ್ಷ್ಮವಾಗಿದೆ. ಅದರಲ್ಲಿಯೇ ನಿಲ್ಲುವ ಸಾಹಸ ಮತ್ತು ವಿಧಾನ ಬೇಕು.

ಕೆಲವೆಡೆ ಬಾಲಕರಾಗಿ ಕೆಲವೆಡೆ ಮಾಲೀಕರಾಗಿರಬೇಕು ಎಂಬ ಲಕ್ಷ್ಯವಿಡಬೇಕೆಂದು ತಿಳಿಸಲಾಗಿದೆ. ಎಲ್ಲಿ ಮಾಲೀಕರಾಗಬೇಕೋ ಅಲ್ಲಿ ಬಾಲಕರಾಗಬಾರದು ಹಾಗೂ ಎಲ್ಲಿ ಬಾಲಕರಾಗಬೇಕೋ ಅಲ್ಲಿ ಮಾಲೀಕರಾಗಬಾರದು. ಬಹುತೇಕರು

ಇದನ್ನು ಸಹ ತಪ್ಪಾಗಿ ತಿಳಿದುಕೊಂಡಿದ್ದಾರೆ. ಈಗ ಇದರ ಪರಿಶೀಲನೆ ಬಹಳ ಬೇಕು. ಪೂರ್ಣ ಬಾಲಕತನವಿದ್ದರೆ ಪೂರ್ಣ ಮಾಲೀಕತನವಿರುತ್ತದೆ. ಆದ್ದರಿಂದ ಸಂಗಮದಲ್ಲಿರಿ ಎಂದು ಹೇಳಿದೆವು. ಕೇವಲ ಬಾಲಕರೂ ಆಗುವುದಲ್ಲ ಮತ್ತು ಕೇವಲ ಮಾಲೀಕರೂ ಆಗುವುದಲ್ಲ. ಎರಡೂ ಗುಣಗಳಿಂದ ಎಲ್ಲವನ್ನು ಸರಿಯಾಗಿ ನಡೆಸಬಲ್ಲಿರಿ. ಬಾಲಕತನ ಎಂದರೆ ನಿಸಂಕಲ್ಪ, ಏನೇ ಆಜ್ಞೆ ಸೂಚನೆಗಳು ಸಿಕ್ಕರೂ ಅದರಂತೆ ನಡೆಯುವುದು. ಮಾಲೀಕತನ ಎಂದರೆ ತಮ್ಮ ಸಲಹೆಯನ್ನು ಕೊಡುವುದು. ಯಾವ ಸ್ಥಾನದಲ್ಲಿ ಮಾಲೀಕರಾಗಬೇಕು ಆ ಸ್ಥಾನ ಮತ್ತು ಸಂದರ್ಭವನ್ನು ನೋಡಬೇಕು. ಎಲ್ಲ ಸ್ಥಾನಗಳಲ್ಲೂ ಮಾಲೀಕರಾಗಬಾರದು. ಎಲ್ಲಿ ಬಾಲಕರಾಗಬೇಕು ಅಲ್ಲಿ ಮಾಲೀಕರಾದರೆ ಸಂಸ್ಕಾರಗಳ ಘರ್ಷಣೆಯಾಗುವುದು. ಆದ್ದರಿಂದ ಪರಸ್ಪರರು ಸಹಯೋಗಿಗಳಾಗಲು ಎರಡು ಮಾತುಗಳನ್ನು ಧಾರಣೆ ಮಾಡಬೇಕು. ಇಲ್ಲವಾದರೆ ಸಂಸ್ಕಾರಗಳ ಘರ್ಷಣೆಯಾಗುವುದು. ಎಲ್ಲಿ ಬಾಲಕರಾಗಬೇಕು ಅಲ್ಲಿ ಮಾಲೀಕರಾದರೆ, ಇಬ್ಬರು ಮಾಲೀಕರಾಗಿರುವುದರಿಂಲೂ ಘರ್ಷಣೆಯಾಗುವುದು. ಸಲಹೆ ಕೊಡುವಾಗ ಮಾಲೀಕರಾಗಬೇಕು, ಅಂತಿಮ ಪರಿಣಾಮ ಬಂದಾಗ ಬಾಲಕರಾಗಬೇಕು. ಯಾವ ಸಮಯದಲ್ಲಿ ಮಾಲೀಕ ಮತ್ತು ಯಾವ ಸಮಯ ಬಾಲಕರಾಗಬೇಕೆಂಬ ಬಗೆಗೆ ಸರಿಯಾದ ಬುದ್ಧಿಯ ನಿರ್ಣಯವಿರಬೇಕು. ಯಾವ ಸಮಯದಲ್ಲಿ ಯಾವ ಸ್ವರೂಪವನ್ನು ಧಾರಣೆ ಮಾಡಿಕೊಳ್ಳಬೇಕೋ ಅದನ್ನೂ ಆಲೋಚಿಸಬೇಕು, ಬಹುರೂಪಿಯಾಗಬೇಕು. ಸದಾ ಏಕರೂಪವಲ್ಲ, ಸಮಯಕ್ಕೆ ತಕ್ಕ ಹಾಗೆಯೇ ಸರಿಯಾದ ರೀತಿಯಲ್ಲಿ ಬಹಿರೂಪಿಯೇ ಹೊರತು ತಪ್ಪು ರೀತಿಯಲ್ಲಿ ಅಲ್ಲ. ಒಳ್ಳೆಯದು-ಓಂ ಶಾಂತಿ.

ಅವ್ಯಕ್ತ ಮುರಳಿ 17-04-1969. ಭಾಗ-2.

**ಬ್ರಾಹ್ಮಣರ ಮುಖ್ಯ ಸಂಸ್ಕಾರ ಸರ್ವಸ್ವತ್ಯಾಗಿ.**

ಆತ್ಮಿಕ ಸ್ಥಿತಿಯಲ್ಲಿ ಇದ್ದು ಮನನ-ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಮಾಸ್ಟರ್ ಸರ್ವಶಕ್ತಿವಂತನು, ಶಿವ ಪರಮಾತ್ಮ ನನ್ನ ತಂದೆ.

1. ನಾನು ಬ್ರಹ್ಮಾತಂದೆಯನ್ನು ಅನುಸರಿಸುತ್ತಾ ಸರ್ವಸ್ವ ತ್ಯಾಗಿಯಾಗಿದ್ದೇನೆ.

2. ನಾನು ಸಾಕಾರ ಬ್ರಹ್ಮಾತಂದೆಯನ್ನು ಅನುಸರಿಸುತ್ತಾ ಇತರರ ಅವ ಗುಣಗಳನ್ನು ನೋಡುವುದನ್ನು ತ್ಯಾಗ ಮಾಡಿದ್ದೇನೆ.

3. ನಾನು ಬ್ರಹ್ಮಾತಂದೆ ಸಮಾನವಾದ ಸರಳತೆ ಮತ್ತು ಸಹನಶೀಲತೆಯ ಸ್ವರೂಪವಾಗಿದ್ದೇನೆ.

4. ನಾನು ನನ್ನ ನಡವಳಿಕೆಯಿಂದ ಬಾಪ್ ದಾದಾರವರನ್ನು ಪ್ರತ್ಯಕ್ಷ ಮಾಡಿದ್ದೇನೆ.

5. ನಾನು ಎಲ್ಲರ ಸಂಸ್ಕಾರ ಸಂಕಲ್ಪಗಳೊಂದಿಗೆ ಹೊಂದಿಕೊಂಡು ಹೋಗುವ ಸ್ನೇಹ ಸ್ವರೂಪ.

6. ನಾನು ಭವಿಷ್ಯ ಫಲವನ್ನು ತುಂಬಿಕೊಳ್ಳುವ ಗುಪ್ತಪುರುಷಾರ್ಥಿ ಮತ್ತು ಗುಪ್ತ ಸಹಾಯಕಾರಿ.

7. ನನ್ನ ಪ್ರತಿಯೊಂದು ತಿನ್ನುವುದು, ಕುಡಿಯುವುದು ಮತ್ತು ಧರಿಸುವುದು ಎಲ್ಲವೂ ಮಧ್ಯಸ್ಥ (ಸರಳತೆ)ವಾಗಿದೆ.

8. ನಾನು ಬಾಲಕ್(ಮಗುವಿನ) ಸ್ಥಿತಿ ಮತ್ತು ಮಾಲಿಕ್(ಯಜಮಾನಿ) ಸ್ಥಿತಿಯನ್ನು ಸಮಯಾನುಸಾರವಾಗಿ ಧಾರಣೆ ಮಾಡುವ ಬಹುರೂಪಿ. (ವಿರುದ್ಧವಾದ ಬಹುರೂಪಿಯಾಗುವುದಲ್ಲ ಸರಿಯಾದ ರೂಪದಲ್ಲಿ ಆಗಬೇಕು).

ಸಂಗಮ ಯುಗದಲ್ಲಿ ವರ್ತಮಾನ ಫಲವನ್ನು ಸ್ವೀಕರಿಸಿದಾಗ ಭವಿಷ್ಯ ಫಲವನ್ನು ಸಮಾಪ್ತಿ ಮಾಡಿಕೊಳ್ಳುತ್ತೇವೆ (ಕರ್ಮ ಫಿಲಾಸಫಿ).

**ಹೆಚ್ಚಿನ ಮಾಹಿತಿಗಾಗಿ.**

1.ಮನನ-ಚಿಂತನೆ(ಮನನ ಶಕ್ತಿ) : ಅವ್ಯಕ್ತ ಮುರಳಿ (01-02-1979 - ಮನನಶಕ್ತಿಯೇ ಮಾಯಾಜಿತ್ ರಾಗುವ ಸಾಧನ.

23-12-1987 - ಮನನ ಶಕ್ತಿ ಮತ್ತು ಮಗ್ನಸ್ಥಿತಿ.

10-01-1988 - ಮನನ ಮಾಡುವ ವಿಧಿ ಮತ್ತು ಮನನ ಶಕ್ತಿಯನ್ನು ಬೆಳೆಸಿಕೊಳ್ಳುವ ಯುಕ್ತಿಗಳು.

01-04-1981 - ಮನನ ಶಕ್ತಿಯ ಮೂಲಕ ಸರ್ವಶಕ್ತಿಗಳ ಸ್ವರೂಪದ ಅನುಭೂತಿ).

2. ತ್ಯಾಗ ಮತ್ತು ಭಾಗ್ಯ:

ಅವ್ಯಕ್ತ ಮುರಳಿ (01-04-1982 : ಭಾಗ್ಯದ ಆಧಾರ ತ್ಯಾಗ.

03-04-1982 : ಸರ್ವ ಪ್ರಥಮ ತ್ಯಾಗ ದೆಹಬಿಮಾನದ ತ್ಯಾಗ.

06-04-1982 : ದಾಸ ಮತ್ತು ಅಧಿಕಾರಿ ಆತ್ಮರ ಲಕ್ಷಣಗಳು.

08-04-1982 : ಲೌಕಿಕ ಮತ್ತು ಅಲೌಕಿಕ ಸಂಬಂಧಗಳ ತ್ಯಾಗ.

11-04-1982 : ವ್ಯರ್ಥದ ತ್ಯಾಗವನ್ನು ಮಾಡಿ ಸಮರ್ಥರಾಗಿರಿ.

13-04-1982 : ತ್ಯಾಗಿ ಮತ್ತು ಮಹಾತ್ಯಾಗಿಯ ವ್ಯಾಖ್ಯಾನ.

28-04-1982 : ಸರ್ವಂಶ ತ್ಯಾಗಿಯ ಗುರುತುಗಳು.

23-11-1981 : ಗುಪ್ತ ದಾನವೇ ಮಹಾದಾನ.

19-04-1971 : ತಪಸ್ಸಿನ ಬಗ್ಗೆ ವಿವರಣೆ/ತ್ಯಾಗ ತಪಸ್ಸು ಮತ್ತು ಸೇವೆಯ ಪರಿಭಾಷೆ.

15-03-1972 : ತ್ಯಾಗ ಮತ್ತು ಭಾಗ್ಯ.)